4ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು

ಸಿಸಿ ನಂ-20912/2013 ಚಾ.ಸಾ.-3 ಅ.ಸಾ.-2

ಪ್ರ.ವ.ಬೊ. ದಿಃ 06.07.2015

| | | |
|---|---|---|
| ಸಾಕ್ಷಿದಾರನ ಹೆಸರು | : | ಕಲಾವತಿ ಆರ್ |
| ಗಂಡನ ಹೆಸರು | : | ದೇವದಾಸ್ |
| ವಯಸ್ಸು | : | 59 ವರ್ಷ |
| ಕೆಲಸ | : | ಎಸ್‌ಬಿಐ, ಹೊರಮಾವು ಶಾಖೆ |
| ವಾಸ | : | ಮಾರುತಿಸೇವಾನಗರ, ಬೆಂಗಳೂರು |

ಮುಖ್ಯ ವಿಚಾರಣೆ ಹಿ.ಸಾ.ಸ.ಅ ರವರಿಂದಃ

ನಾನು 2010 ರಿಂದ ಈಗಲೂ ಹೊರಮಾವಿನ ಎಸ್‌ಬಿಐ ಶಾಖೆಯಲ್ಲಿ ಸಿನೀಯರ್ ಸ್ಪೆಶಲ್ ಅಸಿಸ್ಟೆಂಟ್ ಆಗಿ ಕೆಲಸ ಮಾಡುತ್ತಿದ್ದೇನೆ. ನನಗೆ ಆರೋಪಿ ಪರಿಚಯವಿದೆ. ಅದೇ ಬ್ಯಾಂಕ್‌ನಲ್ಲಿ ಆರೋಪಿಯು ಮ್ಯಾನೇಜರ್ ಆಗಿದ್ದರು. ಎಟಿಎಂನ ಎಲ್ಲಾ ಕೆಲಸವನ್ನು ನಾನೇ ನೋಡಿಕೊಳ್ಳುತ್ತಿದ್ದೆ. ಎಟಿಎಂಗೆ ಸಂಬಂಧಪಟ್ಟ ಪಾಸ್‌ವರ್ಡ್ ನನ್ನ ಕಡೆನೇ ಇದೆ.

ನಮ್ಮ ಮುಖ್ಯ ಕಛೇರಿಯ ಎಟಿಎಂ ಇನ್‌ಚಾರ್ಜ್‌ನ ತಂಡ ಬಂದು ಎಟಿಎಂ ಬ್ಯಾಂಕ್ ಖಾತೆಯಿಂದ ಹೆಚ್ಚು ಹಣ ಡೆಬಿಟ್ ಆಗಿದೆ ಎಂದು ತಿಳಿಸಿ ನಗದು ಹಣವನ್ನೆಲ್ಲಾ ಪರಿಶೀಲನೆ ಮಾಡಿದರು. ನಮ್ಮ ಬ್ಯಾಂಕ್‌ಗೆ ಒಂದು ಎಟಿಎಂ ಅಕೌಂಟ್ ನಂಬರ್ ಇದೆ ನನಗೆ ಜ್ಞಾಪಕಕ್ಕೆ ಬರುತ್ತಿಲ್ಲ,

ಈ ಹಂತದಲ್ಲಿ ಮಾನ್ಯ ಹಿರಿಯ ಸರ್ಕಾರಿ ಸಹಾಯಕ ಅಭಿಯಂತರರು ಸಮಯ ಕೋರಿದ್ದರಿಂದ ಮುಂದುವರಿದ ಮುಖ್ಯವಿಚಾರಣೆಯನ್ನು ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಗಿದೆ.)

ಓ ಹೇ ಕೇ ಸ ಇ ಒ

(ಮಿಸ್. ವೇಲಾ ಡಿ.ಕೆ)

4ನೇ ಅ ಮು ಮ ದಂ, ಬೆಂಗಳೂರು

ಸಾಕ್ಷಿಯನ್ನು ಈ ದಿನಾಂಕಃ 06.08.2015 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆ ಹಿ.ಸ.ಸ.ಅ ರವರಿಂದಃ

ಎಟಿಎಂ ಟೀಮ್‌ರವರು ದಿಃ 29.01.2011 ರಂದು ಹೊರಮಾವು ಶಾಖೆಯ ಎಸ್‌ಬಿಐ ಬ್ಯಾಂಕ್‌ಗೆ ಬಂದು ಎಟಿಎಂ ಟ್ರಾನ್ಸಾಕ್ಷನ್ ಬಗ್ಗೆ ಪರಿಶೀಲನೆ ಮಾಡಿದಾಗ ಆಗ ರೂ. 40 ಲಕ್ಷ ಡೆಬಿಟ್ ಟ್ರಾನ್ಸಾಕ್ಷನ್‌ಗಳು ಕಂಡು ಬಂದಿತು. ಇವೆಲ್ಲಾ ಒಂದೇ ದಿನ ನಡೆದಿದ್ದು ದಿಃ 01.01.2011 ರಂದು ನಡೆದಿರುತ್ತದೆ. ಆಗ ಬ್ರಾಂಚ್ ಕಂಟ್ರೋಲರ್ ರಾಮಲಿಂಗಂರವರು ಬಂದು ನಮ್ಮ ಬ್ಯಾಂಕ್‌ನ ಎಟಿಎಂ ಟ್ರಾನ್ಸ್‌ಕ್ಷನ್ ಅಕೌಂಟ್‌ನ ನಂ. 98549133971 ನ್ನು ಪರಿಶೀಲಿಸಿದಾಗ ರೂ. 40 ಲಕ್ಷ ಲೋನ್ ಅಕೌಂಟ್‌ಗೆ ಟ್ರಾನ್ಸಾಕ್ಷನ್ ಆಗಿರುವುದು ಕಂಡುಬಂತು. ಈ ಸಂಬಂಧವಾಗಿ ಬ್ರಾಂಚ್‌ಕಂಟ್ರೋಲರ್ ರಾಮಲಿಂಗಂರವರು ಕಛೇರಿ ಅಕೌಂಟ್ಸ್‌ನ್ನು ಪರಿಶೀಲನೆ ಮಾಡಿದರು. ಆಗ ಬ್ರಾಂಚ್‌ಮ್ಯಾನೇಜರ್ ದತ್ತಾತ್ರೇಯರವರು ಪಾಸ್‌ವರ್ಡ್‌ನ್ನು ದುರುಪಯೋಗಪಡಿಸಿಕೊಂಡು ಡೆಬಿಟ್ ಟ್ರಾನ್ಸಾಕ್ಷನ್ ಮಾಡಿಕೊಂಡಿದ್ದಾರೆ ಎಂದು ಕಂಡು ಬಂತು. ಬ್ಯಾಂಕ್‌ರವರು ಆರೋಪಿಗೆ ವಿಚಾರಣೆ ಮಾಡಿದರು ಮತ್ತು ವಿಚಾರಣೆ ಮಾಡಿದಾಗ ಆರೋಪಿಯು ಹಣವನ್ನು ಮರುಪಾವತಿ ಮಾಡಿರುತ್ತಾರೆ.

ಆ ಎಟಿಎಂ ಪಾಸ್‌ವರ್ಡ್ ನನ್ನ ಕಡೆ ಪ್ರತ್ಯೇಕವಾಗಿದ್ದು ಇನ್ನೊಂದು ಪಾಸ್‌ವರ್ಡ್ ಪ್ರತ್ಯೇಕವಾಗಿ ಆರೋಪಿ ಕಡೆ ಇರುತ್ತದೆ. ನನಗೆ ಗೊತ್ತಿಲ್ಲದ ಹಾಗೆ ನನ್ನ ಕಡೆ ಇದ್ದಂತಹ ಪಾಸ್‌ವರ್ಡ್‌ನ್ನು ಆರೋಪಿಯು ಬಳಸಿಕೊಂಡು ಬ್ಯಾಂಕ್‌ಗೆ ಮೋಸ ಮಾಡಿದ್ದಾರೆ. ಈ ಎಲ್ಲಾ ವಿಚಾರವನ್ನು ನಾನು ಪೋಲೀಸರಿಗೆ ತಿಳಿಸಿದ್ದೇನೆ. ಆರೋಪಿಯು ಈ ರೀತಿ ಸಂಪಾದನೆ ಮಾಡಿದ ಹಣದಿಂದ ಎರಡು ನಿವೇಶನವನ್ನು ಖರೀದಿ ಮಾಡಿದ್ದಾನೆ ಎಂದು ತಿಳಿದು ಬಂತು. ಈ ವಿಷಯವೆಲ್ಲಾ ವಿಚಾರಣೆ ಕಾಲಕ್ಕೆ ಬ್ರಾಂಚ್ ಕಂಟ್ರೋಲರ್ ರಾಮಲಿಂಗಯ್ಯರವರ ಹತ್ತಿರ ಆರೋಪಿ ಹೇಳಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರು ಸಮಯ ಕೋರಿರುತ್ತಾರೆ, ಪಾಟೀ ಸವಾಲು ಮುಂದೂಡಲಾಯಿತು.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಗಿದೆ.

ಓ ಹೇ ಕೇ ಸ ಇ ಒ

**(ಮಿಸ್. ವೇಲಾ ಡಿ.ಕೆ)**
4ನೇ ಅ ಮು ಮ ದಂ, ಬೆಂಗಳೂರು

ಸಾಕ್ಷಿಯನ್ನು ಈ ದಿನಾಂಕಃ 13.01.2020 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲು ಶ್ರೀ ಎಂ.ಆರ್ ವಕೀಲರಿಂದಃ

ನನಗೆ ಠಾಣೆಗೆ ಬರಲು ಪೊಲೀಸರು ನೋಟೀಸ್ ಕೊಟ್ಟಿಲ್ಲ. ನಾನು ಪೊಲೀಸ್ ಠಾಣೆಗೆ ಹೋಗಿಲ್ಲ. ನಿ.ಪಿ.1 ರಲ್ಲಿ ಏನು ಬರೆದಿದೆ ನನಗೆ ಗೊತ್ತಿಲ್ಲ. ನನ್ನ ಹೇಳಿಕೆಯನ್ನು ಯಾರು ಟೈಪ್ ಮಾಡಿದ್ದು ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿಲ್ಲ. ಪೊಲೀಸರು ನನ್ನನ್ನು ಸಂಪರ್ಕಿಸಿಲ್ಲ. ನನ್ನ ಹೇಳಿಕೆ ಬಗ್ಗೆ ನನಗೆ ಗೊತ್ತಿಲ್ಲ. ನಮ್ಮ ಬ್ಯಾಂಕಿನಲ್ಲಿ ಪ್ರತಿ ವರ್ಷ ಆಡಿಟ್ report ಕಳುಹಿಸುತ್ತೇವೆ ಎಂದರೆ ಸರಿ. ಅದರಲ್ಲಿ ಏನಾದರೂ ವ್ಯತ್ಯಾಸ ಆಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು Senior special assistant ಆಗಿ ಕೆಲಸ ಮಾಡುತ್ತಿದ್ದೆ. ಬ್ಯಾಂಕಿನಲ್ಲಿ ಒಬ್ಬೊಬ್ಬರಿಗೆ ಬೇರೆ ಬೇರೆ ಪಾಸ್‌ವರ್ಡ್ ಇರುತ್ತದೆ. ನಾವು ಮಾಡಿದ ಕೆಲಸ ಮ್ಯಾನೇಜರ್ verify ಮಾಡಿ ಸಹಿ ಮಾಡುತ್ತಾರೆ. ಪ್ರತಿಯೊಂದು ಎಂಟ್ರಿ ಮತ್ತು ಚೆಕ್ ಎಂಟ್ರಿಯನ್ನು ನಾನು ಮಾಡಿದ ನಂತರ ಅದನ್ನು higher officer verify ಮಾಡಿ ಪಾಸ್ ಮಾಡುತ್ತಿದ್ದರು. Day statement ನಾವು verify ಮಾಡುತ್ತಿದ್ದು, ಆ ಸಮಯದಲ್ಲಿ printout ತೆಗೆಯುವಾಗ ತೊಂದರೆಯಾಗಿತ್ತು. ಅಕೌಂಟ್ ನಂಬರ್ 9854913397171 ಅದರ transaction ಬಗ್ಗೆ ಆರೋಪಿಗೆ ಮಾಹಿತಿ ಇದೆ. Loan sanction ಮಾಡಿರುವ ಬಗ್ಗೆ ಆರೋಪಿಗೆ ಮಾಹಿತಿ ಇದೆ. ಎಟಿಎಂ ಮತ್ತು ಲೋನ್‌ನ ಎಲ್ಲಾ ವ್ಯವಹಾರವನ್ನು ನಾನು ನೋಡಿಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ. ನಾನೇ ತಪ್ಪಾಗಿ ಎಂಟ್ರಿ ಮಾಡಿಸಿ ಆರೋಪಿ ಮೇಲೆ ಸುಳ್ಳು ಆಪಾದನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 30 ಅಥವಾ 31.01.2011 ರಂದು ಒಂದು ತಂಡ ಬಂದು ತನಿಖೆ ಮಾಡಿದಾಗ ವ್ಯತ್ಯಾಸ ಕಂಡುಬಂದಿದ್ದರಿಂದ ಪಿರ್ಯಾದಿಗೆ ದೂರು ಕೊಡಲು ತಿಳಿಸಿದ್ದರು. ಅಂತಹವರು ಯಾರು ಬಂದಿಲ್ಲ ಹಾಗೂ visiting book ನಲ್ಲಿ ಎಂಟ್ರಿ ಮಾಡಿಲ್ಲ ಎಂದರೆ ಸರಿಯಲ್ಲ. ಬ್ಯಾಂಕ್ ಮ್ಯಾನೇಜರ್ ಮತ್ತು ಎಜಿಎಂ ಜೊತೆ ಶಾಮೀಲಾಗಿ ಆರೋಪಿ ಮೇಲೆ ಸುಳ್ಳು ಆಪಾದನೆ ಮಾಡಿದ್ದೇವೆ ಎಂದರೆ ಸರಿಯಲ್ಲ. ಎಜಿಎಂ ಮತ್ತು ನಾನು ನಿವೃತ್ತಿ ಹೊಂದಿದ್ದರಿಂದ

ಪಾಸ್‌ವರ್ಡ್‌ನ್ನು create ಮಾಡಿ ನಾವೇ ಹಣ ಪಡೆದು retire ಆಗಿದ್ದೇವೆ ಎಂದರೆ ಸರಿಯಲ್ಲ. ನಾವೇ ಎಲ್ಲಾ ಹಣವನ್ನು ಪಡೆದು ಆರೋಪಿ ಮೇಲೆ ಸುಳ್ಳು ಆಪಾದನೆ ಮಾಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿ ಸೈಟು ಖರೀದಿ ಮಾಡಿದ ದಾಖಲೆಗಳು ಆರೋಪಿ ಬಳಿ ಇವೆ, ನಾನು ಅದನ್ನು ನೋಡಿಲ್ಲ. ಅಂತಹ ಯಾವುದೇ ಸೈಟನ್ನುಆರೋಪಿ ಖರೀದಿ ಮಾಡಿಲ್ಲ, ಅವರು ಬಾಡಿಗೆ ಮನೆಯಲ್ಲಿ ವಾಸವಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಬ್ಯಾಂಕಿನಲ್ಲಿ ನಡೆದ ಅವ್ಯವಹಾರ ನಾವೇ ಮಾಡಿದ್ದು ಎಂದರೆ ಸರಿಯಲ್ಲ. ಹಣ ಕಟ್ಟಿರುವ ಬಗ್ಗೆ ದಾಖಲೆ ಹಾಗೂ voucher ಗಳೆಲ್ಲಾ ಬ್ಯಾಂಕಿನಲ್ಲಿ ಇರುತ್ತದೆ. ಮೇಲಧಿಕಾರಿಯ ಒತ್ತಡದ ಮೇರೆಗೆ ನಾನು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನೇ ಆರೋಪಿಯಾಗಬೇಕಾಗಿದ್ದು ಬ್ಯಾಂಕಿನವರ ಜೊತೆ ಶಾಮೀಲಾಗಿ ಆರೋಪಿ ಮೇಲೆ ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಆರೋಪಿಗೆ ಹಾಗೂ ಈ ಆಪಾದನೆಗೆ ಯಾವುದೇ ಸಂಬಂಧ ಇಲ್ಲ, ಆರೋಪಿ ಮೇಲೆ ಸುಳ್ಳು ಕೇಸು ಹಾಕಿದ್ದೇವೆ ಎಂದರೆ ಸರಿಯಲ್ಲ. ನಾನು ಡೆಬಿಟ್ ಎಂಟ್ರಿ ಕಂಡುಬಂತು ಎಂದು ಹೇಳಿದ್ದು ಹಾಗೂ ಮುಖ್ಯವಿಚಾರಣೆಯಲ್ಲಿ ಹೇಳಿದ್ದು, ಅದನ್ನು ಪೊಲೀಸರಿಗೆ ಹೇಳಿಕೆ ಕೊಡುವಾಗ ಹೇಳಿಲ್ಲ ಎಂದರೆ ಸರಿಯಲ್ಲ. ಆ ಎಟಿಎಂ ಪಾಸ್‌ವರ್ಡ್ ನನ್ನ ಕಡೆ ಪ್ರತ್ಯೇಕವಾಗಿದ್ದು ಇನ್ನೊಂದು ಪಾಸ್‌ವರ್ಡ್ ಪ್ರತ್ಯೇಕವಾಗಿ ಆರೋಪಿ ಕಡೆ ಇರುತ್ತದೆ. ನನಗೆ ಗೊತ್ತಿಲ್ಲದ ಹಾಗೆ ನನ್ನ ಕಡೆ ಇದ್ದಂತಹ ಪಾಸ್‌ವರ್ಡ್‌ನ್ನು ಆರೋಪಿಯು ಬಳಸಿಕೊಂಡು ಬ್ಯಾಂಕ್‌ಗೆ ಮೋಸ ಮಾಡಿದ್ದಾರೆ ಎಂದು ನಾನು ಪೊಲೀಸರ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ. Information technical officer ಕೊಟ್ಟ ವರದಿಯ ಬಗ್ಗೆ ನನಗೆ ಮಾಹಿತಿ ಇಲ್ಲ. ಅಕೌಂಟ್ ಎಸ್.ಎಲ್.ನಂ.1 ರಿಂದ 31 ರವರೆಗೆ ಹಣ ಸಂದಾಯ ಮಾಡಿದ ರಶೀದಿ ಆಗಲೀ, transaction ವಿವರವನ್ನು ಬ್ಯಾಂಕಿನವರು ಕೊಡಬೇಕು, ನಾನು ಹಾಜರು ಮಾಡಿಲ್ಲ. ಆ ದಾಖಲೆಗಳು ನನ್ನ ಬಳಿ ಇದ್ದು, ನಾನು ನಾಶ ಪಡಿಸಿದ್ದು, ಆ ಕಾರಣ ಅದನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಲೋನ್ ಮಂಜೂರು ಮಾಡಿದ ಬಗ್ಗೆ ದಾಖಲೆಗಳು ನಾನು ಹಾಜರು ಮಾಡಿಲ್ಲ, ಅದು ಬ್ಯಾಂಕಿನಲ್ಲಿ ಇರುತ್ತದೆ. ಅಂಜೀತ್ ಯಾರು ಎಂದು ನಾನು ನೋಡಿರುವುದಿಲ್ಲ. ಈ ಕೇಸಿನ ವಿಷಯ ನನಗೆ ಗೊತ್ತಿಲ್ಲ, ಮೇಲಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ

ಎಂದರೆ ಸರಿಯಲ್ಲ.  ಈ ಪ್ರಕರಣದಲ್ಲಿ ಇಲಾಖಾ ವಿಚಾರಣೆಗೆ ನನಗೆ ಕರೆದಿದ್ದಾರೆ, ನನಗೆ ಕರೆದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಗಿದೆ.

ಓ ಹೇ ಕೇ ಸ ಇ ಒ

4ನೇ ಅ ಮು ಮ ದಂ, ಬೆಂಗಳೂರು